

**ಹೊಸ ಹೊಸ ವೈರಸ್‌ಗಳಿಗೆ ಮನುಕುಲ ತುತ್ತಾಗುತ್ತಿರುವ ಸಂದರ್ಭದಲ್ಲಿ, ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸಲಿಕ್ಕೆ ಅಗತ್ಯವಾದ ಮಾರ್ಗಗಳನ್ನು ಕಂಡುಕೊಳ್ಳುವುದು ಈ ಹೊತ್ತಿನ ಅನಿವಾರ್ಯಗಳಲ್ಲೊಂದು. ಅಂಥದೊಂದು ವಿಶಿಷ್ಟ ಔಷಧೀಯ ಮಾರ್ಗ 'ಲಕ್ಷ್ಮೀತರು'. ಜೀವಕ್ಕೆ ಸಂಜೀವಿನಿ ಎನ್ನಬಹುದಾದ, ಆರೋಗ್ಯಲಕ್ಷ್ಮಿ ಎಂದು ಕರೆಯಬಹುದಾದ 'ಲಕ್ಷ್ಮೀತರು' ನಮ್ಮ ಸುತ್ತಮುತ್ತ ಇರಲೇಬೇಕಾದ ಅಪೂರ್ವ ಮರ. ಕ್ಯಾನ್ಸರ್ ರೋಗದ ಚಿಕಿತ್ಸೆಯಲ್ಲಿ ಬಳಸುವ ಲಕ್ಷ್ಮೀತರು ಎಲೆಗಳು ಹಲವು ಕಾಯಿಲೆಗಳಿಗೆ ಮದ್ದೂ ಹೌದು. ಈ ಔಷಧೀಯ ಮರದ ಬಗ್ಗೆ ಸುಮಾರು ಒಂದೂವರೆ ದಶಕದಿಂದ ಬಿಡುಗಣ್ಣಾಗಿರುವ ಲೇಖಕಿ ನೇಮಿಚಂದ್ರ, ಲಕ್ಷ್ಮೀತರುವಿನ ಬಳಕೆ–ಪರಿಣಾಮದ ಬಗ್ಗೆ ತಮ್ಮ ನೋಟ–ಅಧ್ಯಯನದ ಸಂಗತಿಗಳನ್ನು 'ಸುಧಾ' ಓದುಗರಿಗಾಗಿ ಹಂಚಿಕೊಂಡಿದ್ದಾರೆ.**

ನಾನು ಲಕ್ಷ್ಮೀತರು ಬಗ್ಗೆ ಮೊದಲ ಬಾರಿಗೆ ಕೇಳಿದ್ದು ಇಸವಿ 2015ರಲ್ಲಿ. ನಮ್ಮ ವಿಭಾಗದ ರಾಜು (ನಿಜ ನಾಮವಲ್ಲ) ಕಿರಿಯ ವಯಸ್ಸಿನ ಪ್ರತಿಭಾವಂತ ಇಂಜಿನಿಯರ್. ಆತನ ತಂದೆ ಓರ್ವ ಟ್ರಕ್ ಡ್ರೈವರ್. ಬಡತನದ ಹಿನ್ನೆಲೆಯಿಂದ ಬಂದ ಹುಡುಗ, ಇಷ್ಟು ಜಾಣನಿರುವುದು ನನಗೆ ಹೆಮ್ಮೆಯ ವಿಷಯವಾಗಿತ್ತು. ಹೆಚ್ಚಿನ ಜವಾಬ್ದಾರಿಯನ್ನು ಆತನಿಗೆ ನೀಡತೊಡಗಿದ್ದೆ.

ಆದರೆ ಗಮನಿಸಿದೆ, ಇತ್ತೀಚೆಗೆ ಆತ ಪದೇ ಪದೇ ರಜೆ ತೆಗೆದುಕೊಂಡು ತಿರುಚಿನಾಪಳ್ಳಿಯ ತನ್ನ ಊರಿಗೆ ಹೋಗುತ್ತಿದ್ದ. ಕಾರಣ ಆತನ 51 ವರ್ಷದ ತಂದೆಗೆ ಕ್ಯಾನ್ಸರ್ ಆಗಿತ್ತು. ಅದು ಸಾಧಾರಣ ಕ್ಯಾನ್ಸರ್ ಅಲ್ಲ. 2013ರ ತಿರುಚಿನಾಪಳ್ಳಿಯ ಸರಕಾರಿ ಮೆಡಿಕಲ್ ಕಾಲೇಜ್ ಹಾಸ್ಪಿಟಲ್ ರಿಪೋರ್ಟ್ ನೋಡಿದೆ. **'Patient is an operated case of Ameloblastoma mandible, has now presented with pulmonary lesions. Lung biopsy result came as 'Malignant Ameloblastoma Acanthotic typeMetastasis to Lung'** ಎಂದಿತ್ತು. ಅಂದರೆ ಅಮೆಲೊಬ್ಲಾಸ್ಟೋಮಾದ ಈ ರೋಗಿಯ ಮೇಲೆ ಆಗಲೇ ಶಸ್ತ್ರಕ್ರಿಯೆ ನಡೆದಿತ್ತು. ಇದೀಗ ಶ್ವಾಸಕೋಶದ ಬಯಾಪ್ಸಿ, ಆತನ ಶ್ವಾಸಕೋಶಗಳಿಗೂ ಅದೇ ರೋಗ ಹರಡಿ 'ಮೆಟಸ್ಟಾಸಿಸ್' ಸ್ಥಿತಿಯನ್ನು ತಲುಪಿರುವುದನ್ನು ತಿಳಿಸಿತ್ತು.

ಅಮೆಲೊಬ್ಲಾಸ್ಟೋಮಾ ಎಂದರೆ, ಸಾಧಾರಣವಾಗಿ ಕೆಳದವಡೆಯಲ್ಲಿ ಕಾಣಿಸಿಕೊಳ್ಳುವ ಗಡ್ಡೆ. ಅದು ಬಹಳಷ್ಟು ಜನರಲ್ಲಿ ಕೇವಲ ಸಾಮಾನ್ಯ ಗಡ್ಡೆಯಾಗಿರುತ್ತದೆ. ಆದರೆ ಅಪರೂಪಕ್ಕೆ ಅದು ಕ್ಯಾನ್ಸರ್ ಗಡ್ಡೆಯಾಗುವುದುಂಟು. ರಾಜು ತಂದೆಗೆ ತಗುಲಿದ್ದು ಈ ಬಲು ಅಪರೂಪದ ಕ್ಯಾನ್ಸರ್ ಆಗಿದ್ದ ಅಮೆಲೊಬ್ಲಾಸ್ಟೋಮಾ. ದವಡೆಯಲ್ಲಿ ಕಂಡ ಗಡ್ಡೆಯ ಆಪರೇಷನ್ ಆದ ಮೇಲೂ, ಅದಾಗಲೇ ಅದು ಶ್ವಾಸಕೋಶಗಳಿಗೆ ಹರಡಿ ಮೆಟಸ್ಟಾಸಿಸ್ ಸ್ಥಿತಿಯನ್ನು ತಲುಪಿದ್ದು, ಮತ್ತೂ ಅಪರೂಪದ ಕೇಸ್ ಆಗಿತ್ತು. ಈ ಗಡ್ಡೆ ಬೆಳೆಯುತ್ತಾ ದವಡೆ ಮತ್ತು ಮುಖವನ್ನು ವಿಕಾರಗೊಳಿಸಿತ್ತು ಮಾತ್ರವಲ್ಲ, ಬಾಯಿ ಮಾಡಬೇಕಾದ ಅನೇಕ ಕೆಲಸಗಳಿಗೆ ಕಷ್ಟವಾಗುತ್ತಿತ್ತು.

ನಂತರ ಕೊಚ್ಚಿನ್‌ನ 'ಲೇಕ್‌ಶೋರ್ ಹಾಸ್ಪಿಟಲ್ ಅಂಡ್ ರಿಸರ್ಚ್ ಸೆಂಟರ್'ನಲ್ಲಿಯೂ ತೋರಿಸಿದ್ದರು. ಅದೇ ಉತ್ತರವಿತ್ತು. ಅಲೋಪತಿಯಲ್ಲಿ ಸಾಧ್ಯವಾದ ಎಲ್ಲ ಚಿಕಿತ್ಸೆಗಳೂ ನಡೆದವು. ಇಂತಹ ಅಪರೂಪದ ಕ್ಯಾನ್ಸರ್ ಕೇಸಿಗೆ ಚಿಕಿತ್ಸೆ ಸುಲಭವಿರಲಿಲ್ಲ. ತಂದೆಯ ಕೆಳದವಡೆಗೆ ಅಂಟಿದಂತೆ ಎಡಕಿವಿಯ ಕೆಳಗೆ ಜೋತಾಡಿದ ಕ್ಯಾನ್ಸರ್ ಗಡ್ಡೆ ಆಪರೇಷನ್ ಆದ ಈ ವರ್ಷಗಳಲ್ಲಿ ಮತ್ತೆ ಬೆಳೆದು ದೊಡ್ಡದಾಗಿತ್ತು. ಅದನ್ನು ಈಗ ಆಪರೇಷನ್ ಮಾಡಿ ತೆಗೆಯಲು ಹೋದರೆ ಮುಖವೇ ಉಳಿಯುವಂತಿರಲಿಲ್ಲ. ತಂದೆ ನಳಿಕೆಯ ಮೂಲಕ ಆಹಾರ ತೆಗೆದುಕೊಳ್ಳುವ ಪರಿಸ್ಥಿತಿ ಉಂಟಾಗಲಿತ್ತು. ಹಾಗೆಂದೇ ವೈದ್ಯರೇ ಆಪರೇಷನ್‌ಗೆ ಪ್ರೋತ್ಸಾಹ ನೀಡಲಿಲ್ಲ. ಈಗ ಇರುವಷ್ಟು ದಿನ ತಂದೆ ಬಾಯಲ್ಲಿ ಊಟ ಮಾಡುತ್ತಿದ್ದರು. ಆದರೆ ಎಷ್ಟು ದಿನ ಇರಬಲ್ಲರು ಎಂಬುದೇ ಪ್ರಶ್ನೆಯಾಗಿತ್ತು. ಕಾರಣ ಫೆಬ್ರುವರಿ 2015ರ ಆ ಹೊತ್ತು, ತಂದೆ ಸಾಕಷ್ಟು ಗಂಭೀರ ಸ್ಥಿತಿಯಲ್ಲಿ ತೀವ್ರ ನಿಗಾ ಕೇಂದ್ರದಲ್ಲಿ ಇದ್ದರು. ಅವರ ತೂಕ 32 ಕೆ.ಜಿ.ಗಳಿಗೆ ಇಳಿದುಹೋಗಿತ್ತು. ಕ್ಯಾನ್ಸರ್ ಇಡೀ ದೇಹದಲ್ಲಿ ಹರಡಿ ಕುಳಿತಿತ್ತು.

ಅದೇ ವರ್ಷ ಜುಲೈ ತಿಂಗಳು, ಒಂದು ದಿನ ನನ್ನ ಗಮನ ರಾಜುವಿನತ್ತ ಹರಿಯಿತು. ಆತನನ್ನು ಕರೆದು 'ರಾಜು ಇತ್ತೀಚೆಗೆ ನೀನು ಪದೇ ಪದೇ ಊರಿಗೆ ಹೋಗುತ್ತಿಲ್ಲ. ತಂದೆಯವರ ಆರೋಗ್ಯ



ಚೀನಾದ ನೊಬೆಲ್ ವಿಜ್ಞಾನಿ ಪ್ರೊ. ತು ಯೊಯೊ